CoverageReport: TCS IT Wiz – Bangalore Edition

**Publication:**Sanjevani
**Date:** 29/07/2014
**Edition:** Bangalore
**Page No:** 5
**Headline:** TCS IT WIZ



## ರಸಪ್ರಶ್ನೆ ಸ್ಪರ್ಧೆ

ಬೆಂಗಳೂರು, ಜು. ೨೯- ದೇಶದ ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಪ್ರಮುಖ ಸಂಸ್ಥೆಯಾದ ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್ ಆಗಸ್ಟ್ 7 ರಂದು ನಗರದ ಚೌಡಯ್ಯ ಸ್ಮಾರಕ ಭವನದಲ್ಲಿ "ಟಿಸಿಎಸ್ ಐಟಿ ವಿಜ್ - 2014" ಎಂಬ ರಸಪ್ರಶ್ನೆ ಸ್ಪರ್ಧೆಯನ್ನು ಆಯೋಜಿಸಿದೆ.

8ನೇ ತರಗತಿಯಿಂದ 12ನೇ ತರಗತಿವರೆಗಿನ ವಿದ್ಯಾರ್ಥಿಗಳು ಈ ರಸಪ್ರಶ್ನೆ ಸ್ಪರ್ಧೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ಆಸಕ್ತರು ಉಚಿತವಾಗಿ ಸ್ಪರ್ಧೆಯಲ್ಲಿ ಭಾಗವಹಿಸಲು ಪ್ರತಿ ಶಾಲೆ ಅಥವಾ ಕಾಲೇಜಿನಿಂದ ಇಬ್ಬರು ವಿದ್ಯಾರ್ಥಿಗಳನ್ನೊಳಗೊಂಡಂತೆ, ತಲಾ 10 ತಂಡಗಳನ್ನು ಸ್ಪರ್ಧೆಗೆ ಕಳುಹಿಸಬಹುದು.

ದೇಶದ ಅಹಮದಾಬಾದ್, ಬೆಂಗಳೂರು, ಭುವನೇಶ್ವರ, ಚೆನ್ನೈ, ಕೊಯಮತ್ತೂರು, ದೆಹಲಿ, ಹೈದರಾಬಾದ್, ಇಂದೋರ್, ಕೊಚ್ಚಿ, ಕೊಲ್ಕತ, ಲಕ್ನೊ, ಮುಂಬೈ, ನಾಗಪುರ, ಪುಣೆಗಳಲ್ಲಿ ಸ್ಪರ್ಧೆ ನಡೆಯಲಿದೆ. ಹಾಗಾಗಿ ಆಗಸ್ಟ್ 4 ರೊಳಗೆ ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಟಿಸಿಎಸ್ ಐಟಿ ವಿಜ್ ಕಾರಿಡಾರ್, ಟಿಸಿಎಸ್, ಎಸ್‌ಜಿಎಂ ಟವರ್, ನಂ. 18, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು - 560 009 ಅಥವಾ ದೂ. ಸಂಖ್ಯೆ: 080-67246000 ಅನ್ನು ಸಂಪರ್ಕಿಸಬಹುದು.

CoverageReport: TCS IT Wiz – Bangalore Edition

**Publication:**Sanjevani
**Date:** 11/08/2014
**Edition:** Bangalore
**Page No:** 3
**Headline:** St. Paul school students emerge winners at TCS IT WIZ

## ಸೇಂಟ್ ಪಾಲ್ಸ್ ಶಾಲೆಗೆ ರಸಪ್ರಶ್ನೆ ಪ್ರಶಸ್ತಿ

ಬೆಂಗಳೂರು, ಆ. ೧೧- ನಗರದಲ್ಲಿ ಇತ್ತೀಚೆಗೆ ನಡೆದ "ಟಿಸಿಎಸ್ ಐಟಿವಿಜ್" ಎಂಬ ರಸಪ್ರಶ್ನೆ ಸ್ಪರ್ಧೆಯಲ್ಲಿ "ಸೆಂಟ್ ಪಾಲ್ಸ್ ಇಂಗ್ಲಿಷ್ ಹೈ" ಶಾಲೆ ವಿಜಯಿಯಾಗಿ ಹೊರಹೊಮ್ಮಿದೆ.

ದೇಶದ ಮುಂಚೂಣಿ ಐಟಿ ಸಂಸ್ಥೆಯಾದ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ -ಟಿಸಿಎಸ್- ಮಾಹಿತಿ ತಂತ್ರಜ್ಞಾನ ಆಧರಿಸಿ ಆಯೋಜಿಸಿದ ಸ್ಪರ್ಧೆ ದೇಶದಲ್ಲಿ ಅತ್ಯಂತ ದೊಡ್ಡಮಟ್ಟದ ಬುದ್ಧಿಮತ್ತೆ ಪರೀಕ್ಷಾ ರಸಪ್ರಶ್ನೆ ಸ್ಪರ್ಧೆಯಾಗಿದ್ದು, ಸ್ಪರ್ಧೆಯಲ್ಲಿ ನಗರದ 1100ಕ್ಕೂ ಅಧಿಕ ವಿದ್ಯಾರ್ಥಿಗಳು ಪಾಲ್ಗೊಂಡಿದ್ದು ವಿಶೇಷ. ಅಂತಿಮ ಸುತ್ತಿನ ಸ್ಪರ್ಧೆಯಲ್ಲಿ ಸೆಂಟ್ ಪಾಲ್ಸ್ ಇಂಗ್ಲಿಷ್ ಹೈ ಶಾಲೆಯ ವಿದ್ಯಾರ್ಥಿಗಳಾದ ಹರಿಕಿರಣ್. ಸಿ ಮತ್ತು ಸಿದ್ದಾರ್ಥ್ ಶ್ರೀವತ್ಸ ಅವರು ವಿಜಯಿಯಾಗಿ ಹೊರಹೊಮ್ಮಿದರೆ ರನ್ನರ್ ಆಪ್ ಪ್ರಶಸ್ತಿಯನ್ನು ಶ್ರೀಕುಮಾರನ್ ಚಿಲ್ಡ್ರನ್ಸ್ ಹೋಮ್ ಶಾಲೆಯ ವಿದ್ಯಾರ್ಥಿಗಳಾದ ಭಾರ್ಗವ್ ಕೆವೆಲ್, ಅಭಿಷೇಕ್ ಕೃಷ್ಣ ಅವರು ಪಡೆದುಕೊಂಡರು.